

ಕೆಂಪಚಲುವರಾಜಮ್ಮಣ್ಣಿ



ಜಯಲಕ್ಷ್ಮಮ್ಮಣ್ಣಿ, ಮಗಳು ಲೀಲಾವತಿ

ಮಹಾರಾಣಿ ಕೆಂಪನಂಜಮ್ಮಣ್ಣಿ ಅಥವಾ ಶ್ರೀ ವಾಣಿ ವಿಲಾಸ ಸನ್ನಿಧಾನ ಅವರ ಕೈಗೆ ಬಂತು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಪ್ರಾಪ್ತ ವಯಸ್ಕರಾಗುವವರೆಗೆ ವಾಣಿ ವಿಲಾಸ ಅವರೇ ಅಧಿಕಾರ ನಡೆಸಿದರು. ಇದೂ ಕೂಡ ಮೈಸೂರು ಆಡಳಿತದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಕಾಲ. ಅರಮನೆಯ ಪರದೆಯೊಳಗೆ ಇದ್ದುಕೊಂಡೇ ಆ ರಾಜಮಾತೆ ಆಡಳಿತದಲ್ಲಿ ಸಾಕಷ್ಟು ಸುಧಾರಣೆಯನ್ನು ತಂದರು. ಮೈಸೂರು ರಾಜರ ಇತಿಹಾಸದಲ್ಲಿಯೇ ಸುವರ್ಣ ಕಾಲವನ್ನು ಸೃಷ್ಟಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ರೂಪಿಸಿದ್ದು ಅತ್ಯಂತ ಮಹತ್ವದ್ದು. ಅಲ್ಲದೆ ಕೃಷಿ ಕ್ಷೇತ್ರದಲ್ಲಿ ಸುಧಾರಿತ ಪ್ರಯೋಗಗಳನ್ನು ಮಾಡಿದರು. ಚಿನ್ನದ ಗಣಿ ಉದ್ಯಮ, ಕಾವೇರಿ ವಿದ್ಯುತ್ ಯೋಜನೆ, ಮಾರಿಕಣಿವೆ ಜಲಾಶಯ ಯೋಜನೆ, ಬೆಂಗಳೂರು, ಮೈಸೂರು ನಗರಗಳಿಗೆ ಶುದ್ಧ ಕುಡಿಯುವ ನೀರು ಯೋಜನೆ, ಬಾಲಕಿಯವರಿಗೆ ಪ್ರತ್ಯೇಕ ಶಾಲೆಗಳು, ಆಸ್ಪತ್ರೆ ಸ್ಥಾಪನೆ, ಸಂಪರ್ಕ ಸಾಧನಗಳಲ್ಲಿ ಪ್ರಗತಿ ಹೀಗೆ ಹತ್ತಾರು ಪ್ರಜಾಹಿತದ ಕಾರ್ಯಗಳನ್ನು ರಾಜಮಾತೆ ವಾಣಿ ವಿಲಾಸ ಅವರು ಕೈಗೊಂಡರು.

ಚಾಮರಾಜ ಒಡೆಯರ್ ಅವರು ರೂಪಿಸಿದ್ದ ಪ್ರಜಾಪ್ರತಿನಿಧಿ ಸಭೆಗೆ ಸಾಂವಿಧಾನಿಕ ಸ್ಥಾನಮಾನ ನೀಡಿದ್ದು ಈ ರಾಜಮಾತೆ. ಆಡಳಿತ ಸುಧಾರಣೆಗಾಗಿಯೇ ಅವರು ರೀಜೆನ್ಸಿ ಕೌನ್ಸಿಲ್, ಪ್ರತಿನಿಧಾನ ಪರಿಷತ್ ಸ್ಥಾಪಿಸಿದರು. ಮಹಿಳೆಯರಿಗೂ ಮತದಾನದ ಹಕ್ಕು ಪ್ರಾಪ್ತವಾಗಿದ್ದು ಅವರ ಕಾಲದಲ್ಲಿ.

ನಾವು ಈಗ ಮೈಸೂರಿನ ಹೆಮ್ಮೆ ಎಂದು ಗುರುತಿಸುವ ಮೈಸೂರು ಅಂಬಾವಿಲಾಸ ಅರಮನೆಯನ್ನು ಕಟ್ಟಿಸಿದ್ದು ರಾಜಮಾತೆ ವಾಣಿವಿಲಾಸ ಸನ್ನಿಧಾನ. 1897ರ ಫೆಬ್ರುವರಿ 28ರಂದು ರಾಜಕುಮಾರಿ ಜಯಲಕ್ಷ್ಮಮ್ಮಣ್ಣಿ ಮತ್ತು ಸರ್ದಾರ್ ಎಂ. ಕಾಂತರಾಜ ಅರಸರ ವಿವಾಹ ಅರಮನೆಯಲ್ಲಿ ನಡೆಯಿತು. ಆದರೆ ಈ ಸಂತಸ ಬಹಳ ಕಾಲ ಉಳಿಯಲಿಲ್ಲ. ಸಂಜೆ ಹೊತ್ತಿಗೆ ಅಗ್ನಿ ಆಕಸ್ಮಿಕದಿಂದ ಅರಮನೆ ಬೆಂಕಿಗೆ ಆಹುತಿಯಾಯಿತು. ಮರದಿಂದಲೇ ನಿರ್ಮಿಸಲಾಗಿದ್ದ ಅರಮನೆ ಧಗ ಧಗ ಉರಿಯುವುದನ್ನು ನೋಡಿ ರಾಜಮಾತೆ ಧೃತಿಗೆಡಲಿಲ್ಲ. ಸುಟ್ಟು ಹೋದ ಅರಮನೆಯ ಬೂದಿಯ ಮೇಲೆಯೇ ಅವರು ಅತ್ಯಂತ ವೈಭವಯುತವಾದ ಅರಮನೆಯನ್ನು ಕಟ್ಟಿ ನಿಲ್ಲಿಸಿದರು. ಪ್ರಸಿದ್ಧ ವಾಸ್ತುಶಿಲ್ಪಿ ಎಚ್. ಇರ್ವಿನ್ ಅವರ ನಕ್ಷೆಯನ್ನು ಆಧರಿಸಿ 1897ರ ಅಕ್ಟೋಬರ್ ತಿಂಗಳಿನಲ್ಲಿಯೇ ಹೊಸ ಅರಮನೆಗೆ ಶಂಕುಸ್ಥಾಪನೆ ನೆರವೇರಿಸಿದರು. ಈ ಅರಮನೆ 1912ರಲ್ಲಿ ಪೂರ್ಣಗೊಂಡಿತು. ಅದಕ್ಕೆ ತಗುಲಿದ ವೆಚ್ಚ 41,47,913 ರೂಪಾಯಿ.



ರಾಜಾ ರವಿವರ್ಮ ರಚಿಸಿದ
ನಾಲ್ವಡಿ ಕೃಷ್ಣರಾಜ ಒಡೆಯರ ತೈಲಚಿತ್ರ

ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಶುದ್ಧ ಕುಡಿಯುವ ನೀರನ್ನು ನಲ್ಲಿಗಳ ಮೂಲಕ ಸರಬರಾಜು ಮಾಡುವ ಯೋಜನೆ ರೂಪಗೊಂಡಿದ್ದೂ ಕೂಡ ವಾಣಿ ವಿಲಾಸ ಅವರ ಕಾಲದಲ್ಲಿ. ಇದೆಲ್ಲಕ್ಕಿಂತ ಮುಖ್ಯವಾಗಿ ಕನ್ನಂಬಾಡಿ ಕಟ್ಟೆ ನಿರ್ಮಾಣದಲ್ಲಿ ಅವರು ಕೈಗೊಂಡ ನಿರ್ಣಯ ಇಡೀ ಕರ್ನಾಟಕದ ಜನರು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ನಿರ್ಣಯ.

ಕನ್ನಂಬಾಡಿ ಕಟ್ಟೆ ನಿರ್ಮಾಣಕ್ಕೆ ಇದ್ದ ಎಲ್ಲ ಗೊಂದಲಗಳು ನಿವಾರಣೆಯಾಗಿ ಯೋಜನೆಯ ನಕ್ಷೆ ಸಿದ್ಧವಾಯಿತು. ಯೋಜನೆಯ ಅಂದಾಜು ವೆಚ್ಚ 2.53 ಕೋಟಿ. ಆಗಿನ ಕಾಲಕ್ಕೆ ಮೈಸೂರು ರಾಜ್ಯದ ವಾರ್ಷಿಕ ಬಜೆಟ್ ಕೂಡ ಅಷ್ಟು ಇರಲಿಲ್ಲ. ಆಗ ರಾಜಮಾತೆ ಮತ್ತು ಕೃಷ್ಣರಾಜ ಒಡೆಯರ್ ಅವರು ತೆಗೆದುಕೊಂಡ ನಿರ್ಣಯ ಅತ್ಯಂತ ಅಪರೂಪದ್ದು. ಅರಮನೆಯ ಖಾಸಗಿ ಭಂಡಾರದಲ್ಲಿದ್ದ ವಜ್ರ ವೈಢೂರ್ಯ ಆಭರಣಗಳು, ಬೆಳ್ಳಿ ರೂಪಾಯಿಗಳನ್ನು ಬೊಂಬಾಯಿಗೆ ನಾಲ್ಕು ಗೋಣಿ ಚೀಲದಲ್ಲಿ ತೆಗೆದುಕೊಂಡು ಹೋಗಿ ಮಾರಾಟ ಮಾಡಿ, ಆ ಹಣವನ್ನು ಕನ್ನಂಬಾಡಿ ಕಟ್ಟಲು ಬಳಸಿದರು.

ಹೀಗೆ ಮೈಸೂರು ರಾಜಮಾತೆಯರ ಇತಿಹಾಸ ರೋಚಕ. ಜನಾನುರಾಗಿ ಆಡಳಿತದ ಬೀಜ ಬಿತ್ತಿದ್ದು ಅವರು.